ಅನುಮಾನ ಪಟ್ಟರೇನೋ! ಆದರೆ ಯಾರೂ, ಏನೂ ಮಾತಾಡಲಿಲ್ಲ. ಸುಮ್ಮನೆ ಹಿಂದಿರುಗಿದರು.

ಎಂಥದೋ ಸದ್ದಾಯಿತೆಂದು ಎದ್ದುಬಂದಿದ್ದ ಮುದ್ದುವೀರಪ್ಪನ ಅಪ್ಪ ಯಾರೋ ಕಳ್ಳರಿರಬೇಕು ಎಂದುಕೊಂಡು 'ಯಾರು, ಏನು, ಎಂತು' ಎಂದೆಲ್ಲ ಅಡ್ಡ ಪ್ರಶ್ನೆ ಹಾಕಿದ. ಕೊನೆಗೆ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂದಾದಾಗ ಸತ್ಯ ಹೇಳಲೇಬೇಕಾಯಿತು. ಕತ್ತಲೆಯಲ್ಲೂ ಗಾಂಧಿಯ ಆಕಾರದಿಂದಲೇ ಗುರುತಿಸಿದ ಆತ ತನ್ನ ಜನ್ಮ ಪಾವನವಾಯಿತೆಂದು ಶರಣಾಗತನಾದಂತೆ ಪಾದಕ್ಕೆರಗಿದ. ಇಷ್ಟು ದಿನ ತನ್ನ ಮಗ ಗದ್ದೆ ಕೆಲಸ ಮಾಡದೇ ಅಪಾಪೋಲಿ ಥರಾ ಊರೂರು ಅಲೆಯುವ ಕೆಲಸದ ಬಗ್ಗೆ ಅಸಹನೆ ಹೊಂದಿದ್ದಕ್ಕೆ ಪಶ್ಚಾತ್ತಾಪ ವ್ಯಕ್ತಪಡಿಸಿ, 'ಒಂದು ನಿಮಿಷ ಇರಿ, ಅವನನ್ನು ಎಬ್ಬಿಸಿಬಿಡುತ್ತೇನೆ, ತಮ್ಮ ದರ್ಶನ ಭಾಗ್ಯ ಅವನಿಗೂ ಲಭಿಸಲಿ' ಎಂಬ ಕಕ್ಕುಲಾತಿಯಿಂದ ಚಕಚಕನೆ ಅಟ್ಟವನ್ನು ಏರಿ ಎಬ್ಬಿಸಿದಾಗಲೂ ಮಗ ಏಳಲಿಲ್ಲ. ಅವರು ಹೊರಟುಬಿಡುವ ಧಾವಂತದಲ್ಲಿ ಕಾಲಿಂದ ಒದ್ದರೂ ಆತ ಕಿಮಕ್ಕೆನ್ನದೆ, 'ಸುಮ್ನೆ ಹೋಗಪ್ಪ...' ಎಂದಂದು ಮತ್ತೆ ಅತ್ತ ತಿರುಗಿ ಮಲಗಿಕೊಂಡ. ಲಕ್ಷ್ಮಿ ಹುಡುಕಿಕೊಂಡು ಬಂದಾಗ ಕಣ್ಣು ಮುಚ್ಚಿಕೊಂಡರಂತೆ ಎಂಬ ಗಾದೆ ಮಾತಿನಂತೆ, ಸ್ವತಃ ಗಾಂಧಿಯೇ ಹುಡುಕಿಕೊಂಡು ಬಂದರೂ ಅವರನ್ನು ಕಾಣುವ ಸುಯೋಗ ಇಲ್ಲದ ಮಗನ ಹಣೆಬರಹದ ಬಗ್ಗೆ ಪರಿತಪಿಸುತ್ತಾ ಅಸಹಾಯಕನಾಗಿ ಕೆಳಗಿಳಿದು ಬಂದವನು, ಗಾಂಧಿಯವರ ಎರಡೂ ಕೈಗಳನ್ನು ಹಿಡಿದುಕೊಂಡು 'ಅವನನ್ನು ಕ್ಷಮಿಸಿಬಿಡಿ' ಎಂದು ಬೇಡಿಕೊಂಡ. ತಾನು ಹೀಗೆ ಬಂದು ಹೋದ ವಿಚಾರವನ್ನು ಯಾರಿಗೂ ಹೇಳಬೇಡಿರೆಂದು ತಾಕೀತು ಮಾಡಿ, ಕಸ್ತೂರ್ ಬಾ ಅವರಿಂದ ಹತ್ತು ರೂಪಾಯಿಯ ಒಂದು ನೋಟನ್ನು ಪಡೆದು ಮುದುಕನ ಕೈಯಲ್ಲಿ ಇಟ್ಟರು. ಆಗ ಆತ ಮಂತ್ರಮುಗ್ಧನಂತೆ ತಲೆ ಅಲ್ಲಾಡಿಸಿದರೂ ಮಗನ ಮೇಲಿನ ಅಭಿಮಾನವನ್ನು ಬಹಳ ದಿನ ಮುಚ್ಚಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ.

ಈವರೆಗೂ ತೋರುತ್ತಿದ್ದ ಅಪ್ಪನ ಅನಾದರವು ಅತೀವ ವಿನಯ, ಪ್ರೀತಿಗೆ ಬದಲಾವಣೆಯಾಗಿದ್ದನ್ನು ಗಮನಿಸಿದ ಮುದ್ದುವೀರಪ್ಪನೇ ಅನುಮಾನಗೊಂಡು ಏನು ಸಮಾಚಾರವೆಂದು ಕೇಳಿಯೇಬಿಟ್ಟ. ಎಲ್ಲೋ ಇರುವ ಮಹಾತ್ಮನಂಥ ಮಹಾತ್ಮನೇ ನಿನ್ನನ್ನು ಹುಡುಕಿಕೊಂಡು ಬಂದರೂ ನಿನಗೆ ಅವರ ದರ್ಶನ ಪಡೆಯುವ ಭಾಗ್ಯವಿಲ್ಲದಾಯಿತಲ್ಲೋ ಎಂದು ಹಲುಬಿ, ಬಾಚಿ ತಬ್ಬಿಕೊಂಡು, ಕಣ್ಣಲ್ಲಿ ಎರಡು ಹನಿ ನೀರು ತುಳುಕಿಸಿದ. ಈ ಸುದ್ದಿ ಹೀಗೇ ಬೆಳಗ್ಗೆ, ಮರುಬೆಳಗ್ಗೆ ಅನ್ನುವಷ್ಟರೊಳಗೆ ಊರಾದ ಊರಿನ ತುಂಬಾ ಹರಡಿಹೋಗಿ ಮುದ್ದುವೀರಪ್ಪನ ಗೌರವ ಎನ್ನುವುದು ನೂರ್ಮಡಿಸಿತು. ತಾನೇ ಹೋಗಿ ಗಾಂಧಿಯವರನ್ನು ಕಂಡು ಬರಬೇಕೆಂಬ ತುಡಿತದ ತೀವ್ರತೆಯಲ್ಲಿ ಮುದ್ದುವೀರಪ್ಪ ತವಕಿಸಿದರೂ, ಮುಂದಿನ ನಾಲ್ಕೈದು ವರ್ಷದೊಳಗೇ ದೇಶಕ್ಕೆ ಸ್ವಾತಂತ್ರ್ಯ ಬಂದು, ಗಾಂಧಿಯೂ ಹಂತಕರ ಗುಂಡಿಗೆ ಬಲಿಯಾಗಿ ಹೋದದ್ದರಿಂದ ಅಂಥದೊಂದು ಕೊರತೆ ಅವನನ್ನು ಕೊನೆವರೆಗೂ ಕಾಡುತ್ತಲೇ ಇತ್ತು.

ಕೊಂಬೆ–9

ಸರಿಸುಮಾರು ಇಪ್ಪತ್ತು ವರ್ಷಗಳ ಹಿಂದೆ ಇರಬೇಕು, ಬೆಳಗ್ಗೆ ಹತ್ತು ಗಂಟೆಗೆ ಸರಿಯಾಗಿ ಸರ್ಕಾರದ ಹಸಿರು ಬಣ್ಣದ ಬೋರ್ಡು ನೇತುಹಾಕಿಕೊಂಡ ಜೀಪಿನಲ್ಲಿ ರಾಷ್ಟ್ರೀಯ ಹೆದ್ದಾರಿಯ ಅಧಿಕಾರಿಯೊಬ್ಬ ಬಂದ. ಪುಸುಪುಸು ಸಿಗರೇಟು ಸೇದುತ್ತಾ, ಪ್ರಪಂಚದ ಎಲ್ಲ ಸಮಸ್ಯೆಗಳನ್ನು ತಾನೊಬ್ಬನೇ ಪರಿಹರಿಸುವವನಂತೆ ಪೋಸು ಕೊಡುತ್ತಾ ನಿಂತ. ನೆರೆದಿದ್ದ ಗ್ಯಾಂಗ್‌ಮನ್‌ಗಳು ಅವನಿಗೆ ನಮಸ್ಕಾರ ಹಾಕುತ್ತ, ಆತನ ಆದೇಶಕ್ಕಾಗಿ ಕಾದು ನಿಂತಿದ್ದರು. ಆತನಿಗೆ ಹೆದರಿ ಭಯಗ್ರಸ್ಥರಂತೆ ನಿಂತಿದ್ದ ಡ್ರೈವರುಗಳು, ಕ್ಲೀನರುಗಳು ತಮ್ಮ ಅತಿ ವಿನಯವನ್ನು ಪ್ರದರ್ಶಿಸುತ್ತ ಜೀತದಾಳುಗಳಂತೆ ನಿಂತಿದ್ದರು. ಓಹೋ... ಒಬ್ಬ ಸರ್ಕಾರಿ ಅಧಿಕಾರಿಯೆಂದರೆ ಇಷ್ಟೆಲ್ಲ ಮರ್ಯಾದೆ ಸಿಗುತ್ತದೆಯೋ ಎಂದು ನಾನೇ ಆಶ್ಚರ್ಯಪಡುವಷ್ಟರ ಮಟ್ಟಿಗೆ ಅವರು ವಿಧೇಯ ಸೇವಕರಂತೆ, ಆತನ ಅಂಗಾಭಿನಯದ ಆಜ್ಞೆಯನ್ನೂ ಪಾಲಿಸಲು ಕಾದು ನಿಂತಿದ್ದರು. ಕಾಡಿಗೆ ಬೆಂಕಿಬಿದ್ದಾಗ ಸುಟ್ಟು ಕರಕಲಾಗಿದ್ದ ನನ್ನ ಬುಡದಂತೆ ಕರ್ರಗಿದ್ದ ಅವನ ಮುಖದಲ್ಲಿ, ಎಣ್ಣೆಹೊಗೆಯ ಹೊಡೆತಕ್ಕೆ ಸಿಕ್ಕು ಕೆಂಬಣ್ಣಕ್ಕೆ ತಿರುಗಿದ್ದ ಎರಡು ಕಣ್ಣುಗುಡ್ಡೆಗಳು ಮಾತ್ರ ಅತ್ತಿತ್ತ ಹರಿದಾಡುತ್ತಿರುವಂತೆ ಕಾಣುತ್ತಿದ್ದವು. ಕಣ್ಣ ಕರಿಗುಡ್ಡೆಗೂ ಅವನ ಮುಖದ ಬಣ್ಣಕ್ಕೂ ಅಂಥ ವ್ಯತ್ಯಾಸ ಕಾಣದೇ ಅವು ಚಲಿಸುವುದನ್ನು ಮಾತ್ರ ನಾನು ಗ್ರಹಿಸಬಹುದಾಗಿತ್ತು. ಅದ್ಯಾವ ಪುಣ್ಯಾತ್ಮ ಇವನಿಗೆ ಆ ಪುಣ್ಯಕ್ಷೇತ್ರದ ಮಂಜುನಾಥನ ಹೆಸರಿಟ್ಟಿದ್ದರೋ ಗೊತ್ತಿಲ್ಲ. ಇವನು ಮಾತ್ರ ಆ ದೇವರ ಆಶಯಕ್ಕೆ ವಿರುದ್ಧವಾದದ್ದನ್ನೇ ಮಾಡುತ್ತಿದ್ದ. ಈ ದೇವರ ಹೆಸರುಗಳನ್ನು ಇಟ್ಟುಕೊಂಡವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ವಿಚಿತ್ರದವರೇ. ಆಗೆಲ್ಲ ಅನಿಸಿಬಿಡುತ್ತಿತ್ತು ಯಾವ ದೇವರ ಹೆಸರುಗಳನ್ನೂ ಈ ನರಮನುಷ್ಯರಿಗೆ ಇಡದಂತೆ ನಿರ್ಬಂಧಿಸಿಬಿಡಬೇಕೆಂದು!

ಆಗಿನ್ನೂ ಮೊಬೈಲ್ ಫೋನ್ ಬಂದ ಹೊಸತು. ಇಷ್ಟು ದಪ್ಪಗಿನ ಮೊಬೈಲ್ ಫೋನನ್ನು ಸೊಂಟದ ಬೆಲ್ಟ್‌ಗೆ ಹಾಕಿದ್ದ ಪೌಚಿನಿಂದ ಹೊರತೆಗೆದು, ಶರ್ಟು ಜೇಬಿನಿಂದ ಸಣ್ಣ ಡೈರೆಕ್ಟರಿಯನ್ನು ತೆಗೆದು ನಂಬರ್ ಅನ್ನು ಹುಡುಕಿ ಡಯಲ್ ಮಾಡುತ್ತ ಅವನ ಬಾಸಿಗೆ ಫೋನು ಮಾಡಿ ಹೀಗ್ಹೀಗೆಂದು ವರದಿ ಒಪ್ಪಿಸುತ್ತಿದ್ದ. 'ಮರದ ಬುಡದಲ್ಲೇ ರಸ್ತೆ ಹೋಗುತ್ತಿರುವುದರಿಂದ ಅದನ್ನು ಅನಿವಾರ್ಯವಾಗಿ ಕಡಿಯಲೇಬೇಕಾಗಿದೆ ಸರ್... ಹಾಗೆ ತೆಗೆದರೆ ಮಾತ್ರ ಡಬಲ್ ಲೇನ್ ಮಾಡೋಕ್ಕೆ ಸಾಧ್ಯ ಸಾರ್...' ಎಂದು ಬುಡಮೇಲು ಮಾಡಲು ಅನುಮತಿ ಕೇಳುತ್ತಿದ್ದ. ಇನ್ನು ಸ್ವಲ್ಪ ಆ ಕಡೆಗೋ ಇಲ್ಲವೇ ನನ್ನ ಬುಡದ ಇನ್ನೊಂದು ಬದಿಗೋ ರಸ್ತೆ ಮಾಡಬಹುದಲ್ಲಪ್ಪ ಎಂದು ನಾನು ಹೇಳಬೇಕೆಂದುಕೊಂಡೆನಾದರೂ ಅವನಿಗೆ ಹಾಗೆ ಅರ್ಥ ಮಾಡಿಸುವುದಾದರೂ ಹೇಗೆಂದು ಸುಮ್ಮನಾದೆ.

ಊರ ಮಂದಿಯೆಲ್ಲ ಸೇರಿದರು. ನನ್ನ ಬುಡದಲ್ಲಿ ಇಷ್ಟು ದಿನ ನಿಂತು ಕುಂತು ಆಡಿ ಮಲಗುತ್ತಿದ್ದವರೆಲ್ಲ ಏನಿದೆಲ್ಲವೆಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆಗ ತಾನೇ ಕುಲುಮೆಯಿಂದೆದ್ದು ಬಂದಂತಿದ್ದ ಇವನ ಕರ್ರಗಿನ ಮುಖದ ಎದುರು ಬಂದು ಒಬ್ಬೊಬ್ಬರೇ ವಿಷಯವೇನೆಂದು ತಿಳಿದುಕೊಳ್ಳಲು ಪ್ರಯತ್ನಿಸಿದರು. 'ಈ ಮರ ಕಡಿಯಲು ಮೇಲಾಧಿಕಾರಿಗಳಿಂದ ಆದೇಶವಾಗಿದೆ, ಕಡಿಸಲು ಬಂದಿದ್ದೇವೆ...' ಎಂದ. 'ನೋಡಿ, ಇವರು ಪೆರುಮಾಳ್ ಅಂತ. ಸಾಮಿಲ್ ಓನರ್. ಇವರಿಗೆ ಟೆಂಡರ್ ಆಗಿದೆ...' ಎಂದ. 'ಇನ್ನು ನೀವುಂಟು ಅವರುಂಟು, ತನ್ನ ಸುದ್ದಿಗೆ ಬರಬೇಡಿ' ಎನ್ನುವಂತೆ.

ಆಗ ಮುನ್ನೆಲೆಗೆ ಬಂದ ಪೆರುಮಾಳ್, ಅಧಿಕಾರ ತೆಗೆದುಕೊಂಡವನಂತೆ, ಮೊದಲು ಕ್ರೇನ್‌ನವರಿಗೆ ಹೇಳಿ ನನ್ನ ರೆಂಬೆಕೊಂಬೆಗಳಿಗೆ ಸ್ಟೀಲಿನ ರೋಪನ್ನು ಬಿಗಿಯುವಂತೆ ಹೇಳಿದ. ಜನರೆಲ್ಲ, 'ರೀ, ದೇವರ ಮರರೀ ಅದು, ಕಡೀಬ್ಯಾಡ್ರೀ...' ಎನ್ನುತ್ತಿದ್ದರೂ ಅವನು ಕಿವಿಯ ಮೇಲೇ ಹಾಕಿಕೊಳ್ಳಲಿಲ್ಲ. ಡುರ್ರ್ ಡುರ್ರ್ ಎಂದು ಅದು ಆರ್ಭಟಿಸುತ್ತ ಕಬ್ಬಿಣದ ಚೈನಿನ ಪುಲ್ಲಿಯನ್ನು ಅದು ಮೇಲೆತ್ತುತ್ತಿದ್ದಂತೇ ಜೆಸಿಬಿಗಳೂ ನನ್ನ ಬುಡದಲ್ಲಿದ್ದ ಚಪ್ಪಡಿಕಲ್ಲಿನ ಕಟ್ಟೆಯನ್ನು ಬಗಿದು ಬಿಸಾಕಲು ಆನೆಯ ಸೊಂಡಿಲಿನಂತೆ ತನ್ನ ಬಾಣಲೆಯನ್ನು ಮುಂದೆ ತರುತ್ತಿದ್ದಂತೆಯೇ ತುತ್ತ ತುದಿಯಲ್ಲಿದ್ದ ರೆಂಬೆಯಲ್ಲಿ ಆಶ್ರಯ ಪಡೆದಿದ್ದ ಹೆಜ್ಜೇನಿನ ಗೂಡಿಗೆ ಅದೆಲ್ಲಿಂದಲೋ ಕಲ್ಲೊಂದು ಬಂದು ಬಿತ್ತು. ಆ ಕಲ್ಲಿನ ಪೆಟ್ಟು ನನ್ನ ಕೊಂಬೆಗೂ ತಗುಲಿದ್ದರಿಂದ ನಾನೂ ನೋವಿನಿಂದ ರೆಂಬೆಯನ್ನು ಅಗತ್ಯಕ್ಕಿಂತ ಹೆಚ್ಚು ಅಲ್ಲಾಡಿಸಿಬಿಟ್ಟೆ.

ಕ್ಷಣವೊಂದರಲ್ಲಿ ಇಡೀ ವಾತಾವರಣವನ್ನು ಹೆಜ್ಜೇನುಗಳು ಆಕ್ರಮಿಸಿದವು. ಯಾವುದೋ ಒಂದು ಜೇನುಹುಳು ಮಂಜುನಾಥನನ್ನು ಕಚ್ಚಿಬಿಟ್ಟ ತಕ್ಷಣ ಮಂಜುನಾಥನೇ ಇದಕ್ಕೆಲ್ಲ ಕಾರಣ ಎನ್ನುವಂತೆ ಉಳಿದವುಗಳೆಲ್ಲ ಅವನನ್ನೇ ಬೆನ್ನುಹತ್ತಿದವು. ಓಡಿಹೋಗಿ ಜೀಪನ್ನು ಸೇರಿಕೊಂಡ ಮಂಜುನಾಥ ಗ್ಲಾಸನ್ನು ಏರಿಸಿಕೊಳ್ಳುವಷ್ಟರಲ್ಲಿ ಎಂಟು ಹತ್ತು ಹುಳುಗಳು ಒಳಗೆ ಸೇರಿಕೊಂಡು ಅಲ್ಲೇ ಅವನನ್ನು ಅಟ್ಟಾಡಿಸಿದವು. ಗ್ಲಾಸನ್ನು ತೆಗೆದು ಅವನ್ನು ಹೊರಗೆ ಓಡಿಸಬೇಕೆಂದು ಅವನು ಪ್ರಯತ್ನಿಸುತ್ತಿದ್ದರೂ ನೂರಾರು ಹುಳುಗಳು ಅವನ ಜೀಪಿನ ವೇಗಕ್ಕೇ ಪೈಪೋಟಿ ನೀಡುವಂತೆ ಹಾರುತ್ತ ಹೋಗಿ ಮುಂದಿನ ಗ್ಲಾಸಿನಿಂದ ಅವನ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸಲಾರಂಭಿಸಿದ್ದವು. ಅವಕ್ಕೆ ಏನು ಬುದ್ಧಿ ನೋಡಿ, ಪಕ್ಕದಲ್ಲೇ ಇದ್ದು ಜೋರಾಗಿ ಗಾಡಿ ಓಡಿಸುತ್ತಿದ್ದರೂ ಒಂದೂ ಡ್ರೈವರನನ್ನು ಕಚ್ಚಲಿಲ್ಲವೆಂದರೆ ಏನನ್ನಬೇಕು ಅವಕ್ಕೆ. ಉಳಿದವೂ ಊರ ಜನ ಯಾರು, ಹೊರಗಿನ ಜನ ಯಾರು ಎಂಬ ಬೇಧಭಾವವಿಲ್ಲದೇ ಎಲ್ಲರನ್ನೂ ಅಟ್ಟಾಡಿಸಿಕೊಂಡು ಕಚ್ಚಿಹಾಕಿದವು. ಒಬ್ಬೊಬ್ಬರಿಗೂ ಎರಡು ಮೂರು ಹುಳುಗಳು ಅರ್ಧ ಮೈಲಿಯವರೆಗೂ ಅಟ್ಟಾಡಿಸಿಕೊಂಡು ಹೋಗಿ ಕಚ್ಚಿಬಂದವು.